# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

PI RGRHCL 01 MIS 08 2009 Date: 13.02.2012

ಸುತ್ತೋಲೆ

ವಿಷಯ : ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿ, ಸ್ವಂತ ನಿವೇಶನವನ್ನು ಹೊಂದಿಲ್ಲದೇ ಇರುವ ಫಲಾನುಭವಿಗಳು ತಮ್ಮ ಸಾಗುವಳಿ/ಕೃಷಿ ಭೂಮಿ/ಜಮೀನಿನಲ್ಲಿ ಮನೆಯನ್ನು ನಿರ್ಮಿಸಿಕೊಳ್ಳುವ ಬಗ್ಗೆ.

ಉಲ್ಲೇಖ 1 ನಿಗಮದ ಪತ್ರ ಸಂಖ್ಯೆ: RGRHCL 01 MIS 04 2009, Dated: 10.10.2011

2 ಸರ್ಕಾರದ ಆದೇಶ ಸಂಖ್ಯೆ: ವಇ ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ: 30ನೇ ಜನವರಿ 2012.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿ, ಸ್ವಂತ ನಿವೇಶನವನ್ನು ಹೊಂದಿಲ್ಲದೇ ಇರುವ ಫಲಾನುಭವಿಗಳು ತಮ್ಮ ಸಾಗುವಳಿ ಭೂಮಿ/ಜಮೀನಿನಲ್ಲಿ ಮನೆಯನ್ನು ನಿರ್ಮಿಸಿಕೊಳ್ಳಲು ಅನುಮೋದನೆ ನೀಡುವಂತೆ ಉಲ್ಲೇಖ (1)ರ ನಿಗಮದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಸಾಗುವಳಿ/ಕೃಷಿ ಭೂಮಿ/ಜಮೀನಿನಲ್ಲಿ ಮನೆಯನ್ನು ನಿರ್ಮಿಸಿಕೊಳ್ಳಲು ಅನುಮೋದನೆಯನ್ನು ನೀಡಿದ್ದು, ಈ ಬಗ್ಗೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಕೋರಿದೆ.

- ಫಲಾನುಭವಿಯು ತನ್ನ ಜಮೀನಿರುವ ಗ್ರಾಮದಲ್ಲೇ ವಾಸವಾಗಿದ್ದು, ಸ್ವಂತ ನಿವೇಶನ ಅಥವಾ ಮನೆಯನ್ನು ಹೊಂದಿಲ್ಲದೇ ಇರುವ ಬಗ್ಗೆ ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ದೃಢೀಕರಣ ನೀಡಬೇಕು ಮತ್ತು ಅದನ್ನು ಸುರಕ್ಷಿತವಾಗಿ ಫಲಾನುಭವಿಯ ಕಡತದಲ್ಲಿಡಬೇಕು.
- ಬಿ.ಪಿ.ಎಲ್. ಕುಟುಂಬಕ್ಕೆ ನಿಗದಿಪಡಿಸಿರುವಷ್ಟು ಸಾಗುವಳಿ ಜಮೀನು ಹೊಂದಿರುವ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು ಜಮೀನಿನ ದಾಖಲೆಗಳನ್ನು ಪರಿಶೀಲಿಸಿ, ಖಾತರಿಪಡಿಸಿಕೊಳ್ಳತಕ್ಕದ್ದು.
- ಸಾಗುವಳಿ/ಕೃಷಿ ಭೂಮಿ/ಜಮೀನು ಫಲಾನುಭವಿಯ ಹೆಸರಿನಲ್ಲಿ ಅಥವಾ ಫಲಾನುಭವಿಯ ಗಂಡನ ಹೆಸರಿನಲ್ಲಿ ಇರಬೇಕು, ಈ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು ಜಮೀನಿನ ದಾಖಲೆಗಳನ್ನು ಪರಿಶೀಲಿಸಿ, ಖಾತರಿಪಡಿಸಿಕೊಂಡು ದೃಢೀಕರಿಸಿ ಸುರಕ್ಷಿತವಾಗಿ ಫಲಾನುಭವಿಯ ಕಡತದಲ್ಲಿಡಬೇಕು.
- ಆಯ್ಕೆಯಾದ ಫಲಾನುಭವಿಯಿಂದ ಪಡಿತರ ಚೀಟಿ/ಮತದಾರರ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆಯುವುದು.
- ಆಯ್ಕೆಯಾದ ಫಲಾನುಭವಿಯು ಮನೆಯನ್ನು ನಿರ್ಮಿಸಿಕೊಳ್ಳುವ ಸಾಗುವಳಿ/ಕೃಷಿ ಭೂಮಿ/ಜಮೀನು ಆಯಾ ಗ್ರಾಮದ ವ್ಯಾಪ್ತಿಯೊಳಗೆ ಇದ್ದಲ್ಲಿ ಮಾತ್ರ ಅಂತಹವರುಗಳನ್ನು ಪರಿಗಣಿಸುವುದು. ಈ ನಿಯಮ ಮೀರಿದ್ದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳೇ ಜವಬ್ದಾರರು.
- ಸಂಬಂಧಪಟ್ಟ ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು ವಿವಿಧ ವಸತಿ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳು ಅವರು ಹೊಂದಿರುವ ಸಾಗುವಳಿ/ಕೃಷಿ ಭೂಮಿ/ಜಮೀನುಗಳಲ್ಲಿ ಮನೆ ನಿರ್ಮಾಣಕ್ಕಾಗಿ ಗರಿಷ್ಟ ಎರಡು ಗುಂಟೆ ಮೀರದಂತೆ ಒಂದು ಬದಿಯಲ್ಲಿನ ನಿರ್ದಿಷ್ಟ ಭಾಗವನ್ನು "ಸರ್ಕಾರದ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಮಾತ್ರ" ಎಂದು ಅನುಮತಿ ನೀಡತಕ್ಕದ್ದು.

ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,

- **ಹೀಗೆ** **"ಸರ್ಕಾರದ ವಸತಿ ಯೋಜನೆಯಡಿ** ಮನೆ ನಿರ್ಮಾಣಕ್ಕಾಗಿ ಮಾತ್ರ" ಎಂದು ಅನುಮತಿ ನೀಡಿದ ಭಾಗವನ್ನು ವಸತಿಯಲ್ಲದೇ ಬೇರಾವುದೇ ಉದ್ದೇಶಕ್ಕಾಗಿ ಉಪಯೋಗಿಸುವುದಿಲ್ಲವೆಂದು ಮತ್ತು ಈ ಜಮೀನು ಅಥವಾ ಮನೆಯನ್ನು ಕನಿಷ್ಠ 15 ವರ್ಷಗಳ ವರೆಗೆ ಬೇರೆಯವರಿಗೆ ಮಾರಾಟ/ಭೋಗ್ಯ/ಪರಭಾರೆ ಮಾಡುವುದಿಲ್ಲವೆಂದು ಸ್ಟ್ಯಾಂಪ್ ಕಾಗದದಲ್ಲಿ ಜಮೀನಿನ ಮೂಲ ಮಾಲೀಕರಿಂದ ಮುಚ್ಚಳಿಕೆಯನ್ನು ಬರೆಸಿಕೊಳ್ಳುವುದು.
- ಎಲ್ಲಾ ವಸತಿ ಯೋಜನೆಗಳಡಿ ನಿರ್ಮಾಣ ಮಾಡಿಕೊಳ್ಳುವ ಮನೆಯ ವಿಸ್ತೀರ್ಣವು ಕನಿಷ್ಠ 200 ಅಡಿಗಳಷ್ಟು ಹಾಗೂ ಗರಿಷ್ಠ 1200 ಅಡಿಗಳಷ್ಟರವರೆಗೆ ಅವಕಾಶ ನೀಡತಕ್ಕದ್ದು.
- ಎಲ್ಲಾ ವಸತಿ ಯೋಜನೆಗಳಡಿ ನಿರ್ಮಾಣ ಮಾಡಿಕೊಳ್ಳುವ ಮನೆಯ ಒಟ್ಟು ನಿರ್ಮಾಣ ವೆಚ್ಚವು ಗರಿಷ್ಠ ಎರಡು ಲಕ್ಷಗಳವರೆಗೆ ಮಾತ್ರ ಅವಕಾಶ ನೀಡತಕ್ಕದ್ದು. ಹಾಗೂ ನೆಲಮಹಡಿಗೆ ಮಾತ್ರ ಅವಕಾಶವಿರುತ್ತದೆ.

ತಮ್ಮ ವಿಶ್ವಾಸಿ,

ಎನ್.ಎಸ್. ಮಹದೇವ ಪ್ರಸಾದ್
ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

**ಇವರಿಗೆ,**

1. ಎಲ್ಲಾ ಜಿಲ್ಲೆಗಳ ಮಾನ್ಯ ಜಿಲ್ಲಾಧಿಕಾರಿಗಳು.
2. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
3. ಎಲ್ಲಾ ಉಪವಿಭಾಗಾಧಿಕಾರಿಗಳು – ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರ ಮುಖಾಂತರ
4. ~~ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್.~~
5. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರುಗಳು, ತಾಲ್ಲೂಕು ಕಛೇರಿ.
6. ಎಲ್ಲಾ ತಾಲ್ಲೂಕು ನೋಡಲ್ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯ್ತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳಿಗೆ – ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರ ಮುಖಾಂತರ

# ಪ್ರಮಾಣ ಪತ್ರ

(ಫಲಾನುಭವಿಯಿಂದ ಪಡೆದುಕೊಳ್ಳುವುದು)

ಶ್ರೀಮತಿ/ಶ್ರೀ____________________ಬಿನ್/ಕೋಂ__________________ಆದ ನಾನು ___________________ ಜಿಲ್ಲೆ _________________ ತಾಲ್ಲೂಕು ____________________ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ __________________ಗ್ರಾಮದ ವಾಸಿಯಾಗಿದ್ದು, _______ ನೇ ಸಾಲಿನ __________________ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗಿದ್ದು, ಮನೆ ನಿರ್ಮಾಣ ಮಾಡಿಕೊಳ್ಳಲು ಸ್ವಂತ ನಿವೇಶನವನ್ನು ಹೊಂದಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಇದೇ ಗ್ರಾಮದ ಸರ್ವೆ ನಂಬರ್ ___________ ರಲ್ಲಿ ನನ್ನ / ನನ್ನ ಗಂಡನ ಹೆಸರಿನಲ್ಲಿ _______ ಎಕರೆ _______ ಗುಂಟೆ ಸಾಗುವಳಿ/ಕೃಷಿ ಭೂಮಿ/ಜಮೀನಿನ್ನು ಹೊಂದಿದ್ದು, ಸದರಿ ಜಮೀನಿನಲ್ಲಿ ಎರಡು ಗುಂಟೆ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ: ವಇ 55 ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ: 30ನೇ ಜನವರಿ 2012 ರಂತೆ ಹಾಗೂ ನಿಗಮದ ಸುತ್ತೋಲೆ ಸಂಖ್ಯೆ: PI RGRHCL 01 MIS 08 2009, Dated: 13.02.2012 ರಂತೆ "ಸರ್ಕಾರದ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ" ಅನುಮತಿ ನೀಡಬೇಕಾಗಿ ಕೋರುತ್ತೇನೆ.

**ಫಲಾನುಭವಿಯ ಸಹಿ**

ಇಬ್ಬರು ಸ್ಥಳೀಯ ಸಾಕ್ಷಿಗಳ ಸಹಿ (ಪೂರ್ಣ ವಿಳಾಸದೊಂದಿಗೆ)

| | |
|---|---|
| ಹೆಸರು: | ಹೆಸರು: |
| ವಿಳಾಸ: | ವಿಳಾಸ: |
| ಸಹಿ: | ಸಹಿ: |

# ಅನುಮತಿ ಪತ್ರ

(ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು ನೀಡುವುದು)

------------------ ಜಿಲ್ಲೆ ---------------- ತಾಲ್ಲೂಕಿನ ------------------ ಗ್ರಾಮ ಪಂಚಾಯತಿಯ. ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ಆದ ನಾನು ಸರ್ಕಾರದ ಆದೇಶ ಸಂಖ್ಯೆ: ವಇ 55 ಹೆಚ್ಎಎಸ್ 2011, ಬೆಂಗಳೂರು, ದಿನಾಂಕ: 30ನೇ ಜನವರಿ 2012 ರಂತೆ ಹಾಗೂ ನಿಗಮದ ಸುತ್ತೋಲೆ ಸಂಖ್ಯೆ: PI RGRHCL 01 MIS 08 2009, Dated: 15.02.2012 ರಲ್ಲಿ ತಿಳಿಸಿರುವಂತೆ ಅಧಿಕಾರವನ್ನು ಚಲಾಯಿಸಿ. ----------ನೇ ಸಾಲಿನ-------------- ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗಿರುವ ನೀವು ಮನೆ ನಿರ್ಮಾಣ ಮಾಡಿಕೊಳ್ಳಲು ಸ್ವಂತ ನಿವೇಶನವನ್ನು ---------------- ಗ್ರಾಮದಲ್ಲಿ ಹೊಂದಿಲ್ಲದೇ ಇರುವುದರಿಂದ ಇದೇ ------------------ ಗ್ರಾಮದ ಸರ್ವೆ ನಂಬರ್ -------- ರಲ್ಲಿ ನಿಮ್ಮ/ನಿಮ್ಮ ಗಂಡನ ಹೆಸರಿನಲ್ಲಿ ಇರುವ ------- ಎಕರೆ ಜಮೀನಿನಲ್ಲಿ ಎರಡು ಗುಂಟೆ ಜಮೀನನ್ನು ಮೇಲಿನ ಸರ್ಕಾರದ ಆದೇಶ ಹಾಗೂ ನಿಗಮದ ಸುತ್ತೋಲೆಯಲ್ಲಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು **"ಸರ್ಕಾರದ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ"** ಅನುಮತಿ ನೀಡಿರುತ್ತೇನೆ.

**ಚಕ್ಕುಬಂದಿ**

| | |
|---|---|
| ಪೂರ್ವಕ್ಕೆ : | ಪಶ್ಚಿಮಕ್ಕೆ : |
| ಉತ್ತರಕ್ಕೆ : | ದಕ್ಷಿಣಕ್ಕೆ : |

ಸಹಿ.
ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ
(ಕಛೇರಿ ಮೊಹರಿನೊಂದಿಗೆ)

**ವಿಶೇಷ ಸೂಚನೆ:**

ಆದೇಶ ಸಂಖ್ಯೆ: ವಇ 55 ಹೆಚ್ಎಎಸ್ 2011, ಬೆಂಗಳೂರು, ದಿನಾಂಕ: 30ನೇ ಜನವರಿ 2012 ರಂತೆ ಹಾಗೂ ನಿಗಮದ ಸುತ್ತೋಲೆ ಸಂಖ್ಯೆ: PI RGRHCL 01 MIS 08 2009, Dated: 13.02.2012 ರಲ್ಲಿ ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅನುಮತಿಯನ್ನು ರದ್ದುಗೊಳಿಸಿ. ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು.